ಡಾ॥ ವಿ.ಎಸ್. ಆಚಾರ್ಯ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು.

ಆ) ದಿನಾಂಕ: 21–09–2011ರಲ್ಲಿ ವಿಶ್ವವಿದ್ಯಾಲಯದಿಂದ ಆಂತರಿಕವಾಗಿ ವಿಚಾರಣೆ ನಡೆಸಲು ವಿಚಾರಣಾ ಸಮಿತಿಯನ್ನು ರಚಿಸಲಾಗಿದ್ದು, ವಿಚಾರಣಾ ವರದಿಯನ್ನು ನಿರೀಕ್ಷಿಸಲಾಗಿದೆ.

ಇ) ವಿಚಾರಣಾ ವರದಿ ನಿರೀಕ್ಷಿಸಲಾಗಿದೆ.

ಬೆಂಗಳೂರು ವಿಶ್ವವಿದ್ಯಾಲಯದ ಅವ್ಯವಹಾರ

729 (799) ಶ್ರೀ ಎ.ಮಂಜು (ಅರಕಲಗೂಡು) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ವಿಶ್ವವಿದ್ಯಾಲಯದ ಪರೀಕ್ಷಾ ಮೌಲ್ಯಮಾಪನ ಕೇಂದ್ರಗಳಲ್ಲಿ ಒಂದಾದ ಅಲ್ ಅಮೀನ್ ಕಾಲೇಜಿನಲ್ಲಿ ಇತ್ತೀಚೆಗೆ ರಾತ್ರೋರಾತ್ರಿ ಉತ್ತರ ಪತ್ರಿಕೆಗಳು ಕೈ ಬದಲಾವಣೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇದರ ಬಗ್ಗೆ ಸಂಬಂಧಪಟ್ಟ ಕುಲಪತಿಗಳ ಮೇಲಾಗಲೀ ಅಥವಾ ಪರೀಕ್ಷಾ ವಿಭಾಗದ ಮುಖ್ಯಸ್ಥರಾದ ಕುಲಸಚಿವರ ಮೇಲಾಗಲೀ ಇನ್ನೂ ಸಹ ಏಕೆ ಕ್ರಮ ಕೈಗೊಂಡಿರುವುದಿಲ್ಲ;

ಇ) ಹೊರ ಗುತ್ತಿಗೆದಾರರ ನೇಮಕಾತಿಯಿಂದ ವಿಶ್ವವಿದ್ಯಾಲಯಕ್ಕೆ ಉಂಟಾಗುತ್ತಿರುವ ಖರ್ಚುವೆಚ್ಚಗಳ ಬಗ್ಗೆ ಸರ್ಕಾರಕ್ಕೆ ಅಂದಾಜಿದೆಯೇ;

ಈ) ಸರ್ಕಾರಿ ಸೇವೆಯಿಂದ ನಿವೃತ್ತರಾದವರನ್ನು ವಿಶ್ವವಿದ್ಯಾಲಯದ ಸೇವೆಗೆ ಪುನರ್ ನೇಮಕ ಮಾಡಬಹುದೇ;

ಉ) ಇದು ಸರ್ಕಾರದ ನಿಯಮಗಳಿಗೆ ವಿರುದ್ಧವಾಗಿಲ್ಲವೇ?

ಡಾ॥ ವಿ.ಎಸ್. ಆಚಾರ್ಯ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು.

ಆ) ವಿಷಯವು ವಿಚಾರಣಾ ಹಂತದಲ್ಲಿದೆ. ವಿಚಾರಣಾ ವರದಿಯ ಆಧಾರದ ಮೇಲೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು.

ಇ) ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಹೊರಗುತ್ತಿಗೆದಾರರ ನೇಮಕಾತಿಯಿಂದ ಅಂದಾಜು ಮಾಸಿಕ ರೂ.12,80,425/– ರಷ್ಟು ಖರ್ಚಾಗುತ್ತಿದೆ.

ಈ) ಸರ್ಕಾರಿ ಸೇವೆಯಿಂದ ನಿವೃತ್ತರಾದವರನ್ನು ವಿಶ್ವವಿದ್ಯಾಲಯದ ಸೇವೆಗೆ ಪುನರ್ ನೇಮಕ ಮಾಡಲು ಕೆ.ಸಿ.ಎಸ್.ಆರ್. ನಿಯಮಗಳಲ್ಲಿ ಅವಕಾಶ ಕಲ್ಪಿಸಲಾಗಿದೆ.

ಉ) ಇಲ್ಲ.

ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಭೋದಕ ವರ್ಗ ಹುದ್ದೆ ಪದನಾಮ ಬದಲಾವಣೆ

730 (1113) ಶ್ರೀ ಎ.ಮಂಜು (ಅರಕಲಗೂಡು) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರದ ಆದೇಶ ED-37/2009 ದಿನಾಂಕ:24.12.2009ರ ಪ್ರಕಾರ ಬೆಂಗಳೂರು ವಿಶ್ವವಿದ್ಯಾಲಯಗಳಲ್ಲಿ ಸಹಾಯಕ ಪ್ರಾಧ್ಯಾಪಕ, ಸಹ ಪ್ರಾಧ್ಯಾಪಕ, ಪ್ರಾಧ್ಯಾಪಕ ಹಾಗೂ ಪ್ರಾಧ್ಯಾಪಕ (ಹಿರಿಯ)ಹುದ್ದೆಗಳ ಪದನಾಮಗಳನ್ನು ಮೇಲಿನ ಆದೇಶದಂತೆ ಬದಲಾಯಿಸಲಾಗಿದೆಯೇ;

ಆ) ಹಾಗಿದ್ದಲ್ಲಿ, ಸರ್ಕಾರದ ಈ ಆದೇಶವನ್ನು ಬೆಂಗಳೂರು ವಿಶ್ವವಿದ್ಯಾಲಯದ ಶಾಸನಾತ್ಮಕ ಪ್ರಾಧಿಕಾರಿಗಳಿಂದ ಅನುಮೋದನೆಗೊಂಡಿರುವ CAS 2006 ನಿಯಮಾವಳಿಗಳನ್ನು ಸರ್ಕಾರದ ಅನುಮೋದನೆಗಾಗಿ ಕಾಯ್ದಿರಿಸಲಾಗಿದೆಯೇ;

ಇ) ಈ ಸರಕಾರಿ ಆದೇಶದ ಅನುಷ್ಠಾನದ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆ 2000ಗೆ ಸೂಕ್ತ ತಿದ್ದುಪಡಿಗಳ ಅಗತ್ಯವಿದೆಯೆ;

ಈ) ಈ ಸರಕಾರಿ ಆದೇಶವನ್ನು ಅನುಷ್ಠಾನಗೊಳಿಸುವ ಮೊದಲು CAS 1996 ಯೋಜನೆಯ ಪ್ರಕ್ರಿಯೆಯನ್ನು ಆಖೈರುಗೊಳಿಸುವ ಸಂಬಂಧ ಬೆಂಗಳೂರು ವಿಶ್ವವಿದ್ಯಾಲಯವು ಕೈಗೊಂಡಿರುವ ಕ್ರಮಗಳೇನು?

ಡಾ॥ ವಿ.ಎಸ್. ಆಚಾರ್ಯ (ಉನ್ನತ ಶಿಕ್ಷಣ ಸಚಿವರು) :

ಅ) ಸರ್ಕಾರದ ಆದೇಶದನ್ವಯ ವಿಶ್ವವಿದ್ಯಾನಿಲಯದಲ್ಲಿ ಭೋದಕರ ಹುದ್ದೆಗಳ ಪದನಾಮವನ್ನು ಬದಲಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆ) CAS ಪರಿನಿಯಮಾವಳಿಗಳನ್ನು ರಚಿಸುವ ಬಗ್ಗೆ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.